No. 242

CS (MAIN) EXAM, 2010

D-DTN-K-LOB

# KANNADA
## Paper II
## (Literature)

Time Allowed : Three Hours

Maximum Marks : 300

---

*INSTRUCTIONS*

***Candidates should attempt questions 1 and 5 which are compulsory, and any THREE of the remaining questions, selecting at least ONE question from each Section.***

***All questions carry equal marks.***

***Answers must be written in Kannada.***

---

## SECTION A

1. ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪದ್ಯಗಳ ಸಂದರ್ಭವನ್ನು ಸೂಚಿಸಿ, ಅವುಗಳ ಭಾವ ಮತ್ತು ಸ್ವಾರಸ್ಯಗಳನ್ನು ಕುರಿತು ಬರೆಯಿರಿ : *20×3=60*

(a) ಒಡಲೆರಡೊಂದೆ ಜೀವಮಿವರ್ಗೆಂಬುದನೆಂಬುದು ಲೋಕಮೀಗಳಾ ।

ನುಡಿ ಪುಸಿಯಾಯ್ತು ನಿನ್ನಸು ಕಿರೀಟಿಯ ಶಾತ ಶರಂಗಳಿಂದೆ ಪೋ ॥

ಪೊಡೆಮೆನಗಿನ್ನುಮೀಯೊಡಲೊಳಿರ್ದುದು ನಾಣಿಲಿ ಜೀವಮೆಂದೊಡಾ ।

ವೆಡೆಯೊಳಿ ನಿನ್ನೊಳಿನ್ನ ಕಡುಗೂರ್ಮೆಯಮಳ್ಕಱುಮಂಗವಲ್ಲ ಭಾ ॥

(b) ಕೊಟ್ಟ ಕುದುರೆಯನೇರಲರಿಯದೆ
ಮತ್ತೊಂದು ಕುದುರೆಯನೇರ ಬಯಸುವವರು,
ವೀರರೂ ಅಲ್ಲ, ಧೀರರೂ ಅಲ್ಲ ಇದು ಕಾರಣ -
ನೆರೆ ಮೂರು ಲೋಕವೆಲ್ಲವೂ ಹಲ್ಲಣವ ಹೊತ್ತುಕೊಂಡು,
ತೊಳಲುತ್ತ ಇದ್ದಾರೆ
ಗುಹೇಶ್ವರನೆಂಬ ಲಿಂಗವನವರೆತ್ತ ಬಲ್ಲರು ?

(c) ದೇವ ಹಗೆಯಾಗಿರನು ಕರ್ಣನ
ದಾವ ಹದನೆಂದರಿಯೆ ಮನದಲಿ
ನೋವು ಮಿಗುವುದು ಕೈಗಳೇಳವು ತುಡುಕುವಡೆ ಧನುವ
ಜೀವವೀತನ ಮೇಲೆ ಕರಗುವು
ದಾವ ಸಖನೋ ಶತ್ರುವೆಂಬೀ
ಭಾವನೆಯ ಬಗೆ ಬೀಳುಕೊಂಡುದು ಕರ್ಣನಾರೆಂದ ।।

(d) ಏನು ಬರುವುದೋ ಸಂಗ/ಡೇನು ಬರುವುದೋ
ದಾನ ಧರ್ಮ ಮಾಡಿ ಬಹು ನಿ/ಧಾನಿ ಎನಿಸಿಕೊಳ್ಳು
ಮನುಜ ।ಪ।
ಎನ್ನದೆಂದು ತನ್ನದೆಂದು ಹೊನ್ನು ಹೆಣ್ಣು ಮಣ್ಣಿಗಾಗಿ
ಘನ್ನವಾಗಿ ಬಾಯ ಬಿಡುತ ಬಂದೆ ಮೋಹನಾ
ಸನ್ನುತದಲ್ಲಿ ಪರಹಿತಾರ್ಥ ಮಾಡಿ
ಪುಣ್ಯ ಪಡೆಯಿನಿತು ಮುಂದೆ ಕಿರುಕುಳದ ಕೂಪದಲ್ಲಿ
ಕೆಡಲು ಬೇಡ ಮನುಜ ।।

2. ವಡ್ಡಾರಾಧನೆಯ ಸುಕುಮಾರಸ್ವಾಮಿ ಕತೆಯಲ್ಲಿ ಕಂಡು ಬರುವ ಸಾಂಸ್ಕೃತಿಕ ಅಂಶಗಳನ್ನು ವಿವೇಚಿಸಿರಿ. 60

3. ಭರತೇಶನ ಯೋಗ-ಭೋಗ ಸಮನ್ವಯವನ್ನು ಎರಡು ಪ್ರಸಂಗಗಳನ್ನು ವಿಶ್ಲೇಷಿಸಿ ಚರ್ಚಿಸಿರಿ. 60

4. ಕನಕದಾಸರ ರಾಮಧಾನ್ಯ ಚರಿತೆಯಲ್ಲಿಯ ಶಿಷ್ಟ-ಜಾನಪದಗಳ ಚರ್ಚೆಯನ್ನು ನಿರೂಪಿಸಿರಿ. 60

## SECTION B

5. ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ (ಸುಮಾರು 200 ಶಬ್ದಗಳಲ್ಲಿ) : *20×3=60*

   (a) 'ತುಘಲಕ'ನ ಸಮಾಜ ಮತ್ತು ರಾಜಕೀಯ.

   (b) ಕಾರಂತರ 'ಬೆಟ್ಟದ ಜೀವ' ಕಾದಂಬರಿಯ ಸಂವೇದನೆ ಹಾಗೂ ಜೀವನದೃಷ್ಟಿ.

   (c) 'ಒಡಲಾಳ'ದ ಸಾಕವ್ವ ಶೋಷಿತ ಸ್ತ್ರೀ ಸಾಧ್ಯತೆಯ ಸಂಕೇತವಾಗಿದ್ದಾಳೆ' — ಪರಿಶೀಲಿಸಿ.

   (d) ಒಗಟುಗಳ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳು.

6. ಸಮಕಾಲೀನ ಸಾಮಾಜಿಕ ಸಂವೇದನೆಗಳು ಹೊಸಗನ್ನಡ ಕಾವ್ಯದಲ್ಲಿ ಅಭಿವ್ಯಕ್ತಗೊಂಡ ಬಗೆಯನ್ನು ನಿಮ್ಮ ಪಠ್ಯವನ್ನಾಧರಿಸಿ ಬರೆಯಿರಿ. *60*

7. ಕನ್ನಡ ಸಣ್ಣಕತೆಗಳ ಪರಂಪರೆ ಮತ್ತು ಪ್ರಯೋಗಶೀಲತೆಯನ್ನು ನೀವು ಪಠ್ಯವಾಗಿ ಓದಿರುವ ಮೂರು ಕತೆಗಳನ್ನು ಆಧರಿಸಿ ಚರ್ಚಿಸಿರಿ. *60*

8. ಕನ್ನಡ ಜನಪದ ಗೀತೆಗಳ ಪ್ರಾದೇಶಿಕ ವ್ಯತ್ಯಾಸಗಳನ್ನು ಗುರುತುಸಿರಿ. *60*